**ಸಾಕ್ಷಿಯನ್ನು ದಿನಾಂಕ 13.11.2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಆಪಾದಿತಿ ಲಾರಿಯೇ ವಾಹನ ಪಡಿಸಿರುತ್ತದೆ ಎಂದು ನಾನಾಗಲೀ, ನಮ್ಮ ಮನೆಯವರಾಗಲೀ ನೋಡಿಲ್ಲ. ಪೊಲೀಸ್ ದಾಖಲಾತಿಗಳಾದ ನಿಪಿ 1 ಮತ್ತು 2 ರಲ್ಲಿ ಲಿ ಆಪಾದಿತಿ ಲಾರಿಯ ಸಂಖ್ಯೆ ಇರುವುದಿಲ್ಲ ಹಾಗೂ ನಿಪಿ 4 ರಲ್ಲಿ ಆಪಾದಿತ ವಾಹನಕ್ಕೆ ಯಾವುದೇ ಜಖಂ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ನ್ಯಾಯಾಲಯದಲ್ಲಿ ಬಿಟ್ಟು ಬೇರೆ ಎಲ್ಲಿಯೂ ನಾನು ಸಾಕ್ಷ್ಯವನ್ನು ನೀಡಿರುವುದಿಲ್ಲ. ನಿಪಿ 6 ಶವ ಪಂಚನಾಮೆಯ ಪೂರ್ತಿ ದಾಖಲಾತಿಯನ್ನು ಕೊಟ್ಟಿಲ್ಲ, ಸತ್ಯಾಂಶವನ್ನು ಮರೆಮಾಚುವ ಉದ್ದೇಶದಿಂದ ಪೂರ್ತಿ ದಾಖಲಾತಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತವು ನೈಸ್ ರಸ್ತೆಯಲ್ಲಿ ಸಂಭವಿಸಿದೆ ಎಂದರೆ ಹೌದು, ಯಾವ ಟೋಲ್ ಯಿಂದ ಯಾವ ಟೋಲ್ ಗೆ ಹೋಗಿರುತ್ತಾರೆ ಎಂದು ನನಗೆ ವರದಿಯನ್ನು ಕೊಡಲು ಆಗುವುದಿಲ್ಲ. ಆಪಾದಿತ ಲಾರಿಯು ನನ್ನ ಗಂಡನಿಗೆ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು, ಆಪಾದಿತ ಲಾರಿಯ ಮಾಲೀಕರು ಮತ್ತು ನಾನು ಶಾಮೀಲಾಗಿ ಆಪಾದಿತ ಲಾರಿಯ ಮೇಲೆ ಸುಳ್ಳು ಆರೋಪ ಮಾಡಿದ್ದೇವೆ ಎಂದರೆ ಸರಿಯಲ್ಲ. ಯಾವುದೋ ವಾಹನ ನನ್ನ ಗಂಡನ ಮೋಟಾರು ಸೈಕಲ್ ಗೆ ಡಿಕ್ಕಿಪಡಿಸಿ ಹೋಗಿರುತ್ತದೆ, ಸದರಿ ವಾಹನ ಸಿಕ್ಕಿರುವುಹಿದಿಲ್ಲ ಎಂದು ಆಪಾದಿತ ಲಾರಿಯ ಮೇಲೆ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಆಪಾದಿತ ಲಾರಿಯು ನನ್ನ ಗಂಡನಿಗೆ ಅಪಘಾತ ಪಡಿಸಿಲ್ಲದ ಕಾರಣ 2ನೇ ಎದುರುದಾರರು ಯಾವುದೇ ಪರಿಹಾರ ಪಾವತಿಸಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ನನ್ನ ಗಂಡನಿಗೆ ಒಬ್ಬ ಸಹೋದರ. ಅವರೂ ಸಹ ಮೃತಪಟ್ಟಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ಕೊಡಬಲ್ಲೆ. ನಮ್ಮ ಕುಟುಂಬಕ್ಕೆ ಪಡಿತರ ಚೀಟಿ ಇದೆ. ಪಡಿತರ ಚೀಟಿಯಲ್ಲಿ 3 ಮತ್ತು 4ನೇ ಅರ್ಜಿದಾರರ ಹೆಸರು ಇಲ್ಲ ಎಂದರೆ ಸರಿಯಲ್ಲ. ನಮ್ಮ ಮಾವನ ಹೆಸರಿನಲ್ಲಿ ಯಾವುದೇ ಜಮೀನು ಇದೆ ಎಂದರೆ ಸರಿಯಲ್ಲ. ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ಅತ್ತೆ

ಮತ್ತು ಮಾವನಿಗೆ ಬೇರೆ ಆದಾಯ ಇದೆ, ಅವರು ನನ್ನ ಗಂಡನ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಪೇಪರ್ ಏಜೆನ್ಸಿ ಆಗಿದ್ದರು ಎಂದು ಯಾವುದೇ ದಾಖಲಾತಿ ಇಲ್ಲ. ಅವರು ಯಾವುದೇ ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ. ನನ್ನ ಗಂಡನಿಗೆ 40 ಸಾವಿರ ಮಾಸಿಕ ಆದಾಯ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ನನ್ನ ಗಂಡನಿಗೆ ಮಾಸಿಕ 40 ಸಾವಿರ ಆದಾಯ ಇರಲಿಲ್ಲ, ಹೆಚ್ಚಿ ನ ಪರಿಹಾರ ಪಡೆಯಲು ಅವರು 40 ಸಾವಿರ ಆದಾಯ ಇತ್ತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮೃತಪಡುವ ಕಾಲಕ್ಕೆ ನನ್ನ ಗಂಡನಿಗೆ 41 ವರ್ಷ ಆಗಿತ್ತು ಎಂದರೆ ಸರಿಯಲ್ಲ, 37 ವರ್ಷ ಆಗಿತ್ತು. ನನ್ನ ಗಂಡನ ಅಂತ್ಯಸಂಸ್ಕಾರಕ್ಕೆ 3 ಲಕ್ಷ ಖರ್ಚಾಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು, ಬೆಂಗಳೂರು.**